**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾ ಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.**

**ಸಿ.ಸಿ. ಸಂಖ್ಯೆಃ 2400/2022**

ಫಿರ್ಯಾದಿದಾರರುಃ ಸರ್ಕಾರದ ಪರ ಬಿಳಿಕೆರೆ ಪೊಲೀಸ್ ಠಾಣೆ
ಹುಣಸೂರು ವೃತ್ತ, ಹುಣಸೂರು.

ವಿರುದ್ಧ,

ಆರೋಪಿ/ಗಳು : **ಎ 1. ಈರಣ್ಣ ನಾಯಕ**
ತಂದೆ - ಲೇಟ್ ಚೌಡ ನಾಯಕ,
ಸುಮಾರು **40** ವರ್ಷ ವಯಸ್ಸು,

**ಎ 2. ಚಾಮಮ್ಮ**
ಕೋಂ ಲೇಟ್ ಚೌಡ ನಾಯಕ,
ಸುಮಾರು **60** ವರ್ಷ ವಯಸ್ಸು,

ಇಬ್ಬರೂ ಮಾಡಳ್ಳಿ ಕೊಪ್ಪಲು ಗ್ರಾಮದ
ವಾಸಿಗಳು, ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

# ದೋಷಾರೋಪಣೆ

**ಶ್ರೀಮತಿ. ನಮ್ರುತಾ ಎಸ್. ಹೊಸಮಠ,** ಬಿ.ಎ., ಎಲ್.ಎಲ್.ಬಿ., ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ:14.06.2009 ರಂದು ಸಾಕ್ಷಿ-1 ರವರು 1ನೇ ಆರೋಪಿಯಾದ ನಿಮ್ಮನ್ನು ಮದುವೆಯಾಗಿದ್ದು, ಮದುವೆಯ ನಂತರದ ದಿವಸಗಳಲ್ಲಿ, ಸಾಕ್ಷಿ-1 ರವರು ಮಾದಳ್ಳಿ ಕೊಪ್ಪಲು ಗ್ರಾಮದಲ್ಲಿ, ನಿಮ್ಮ ಜೊತೆ ಮನೆಯಲ್ಲಿದ್ದಾಗ 1 ಮತ್ತು 2ನೇ ಆರೋಪಿಗಳಾದ ನೀವುಗಳು ಸಾಕ್ಷಿ-1 ರವರಿಗೆ ಅಪರಾಧ ಎಸಗುವ ಸಮಾನ ಉದ್ದೇಶವುಳ್ಳವರಾಗಿ, ಸಾಕ್ಷಿ-1 ರವರಿಗೆ ಮಾನಸಿಕವಾಗಿ ಹಾಗೂ ದೈಹಿಕವಾಗಿ

ಹಿಂಸೆಯನ್ನು ನೀಡಿರುತ್ತೀರೆಂದು ಮತ್ತು ದಿನಾಂಕ: 02.01.2022 ಕ್ಕೆ ಒಂದು ವಾರದ ಹಿಂದಿನಿಂದಲೂ ಕೂಡ 2ನೇ ಆರೋಪಿಯಾದ ನೀವು ಸಾಕ್ಷಿ-1 ರವರಿಗೆ ನೀನು ನಮ್ಮ ಮನೆಗೆ ಬಂದ ಮೇಲೆ ಧರಿದ್ರ ಬಂದಿದೆ ನೀನು ಎಲ್ಲಾದರೂ ಹೋಗಿ ಸಾಯಿ ಎಂದು ಮನಸ್ಸಿಗೆ ನೋವುಂಟಾಗುವಂತೆ ಮಾನಸಿಕವಾಗಿ ಹಿಂಸೆಯನ್ನು ನೀಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 498(ಎ) ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

2. ಎರಡನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ಮತ್ತು 2ನೇ ಆರೋಪಿಗಳಾದ ನೀವುಗಳು ಅಪರಾಧ ಎಸಗುವ ಸಮಾನ ಉದ್ದೇಶವುಳ್ಳವರಾಗಿ, ಸಾಕ್ಷಿ-1 ರವರಿಗೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

3. ಕೊನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ಮತ್ತು 2ನೇ ಆರೋಪಿಗಳಾದ ನೀವುಗಳು ಅಪರಾಧ ಎಸಗುವ ಸಮಾನ ಉದ್ದೇಶವುಳ್ಳವರಾಗಿ, ಸಾಕ್ಷಿ-1 ರವರಿಗೆ ಕೈಯಿಂದ ಹಲ್ಲೆ ಮಾಡಿದ್ದು ಮತ್ತು ದಿನಾಂಕ: 02.01.2022 ರಂದು 2ನೇ ಆರೋಪಿಯಾದ ನೀವು ಸಾಕ್ಷಿ-1 ರವರಿಗೆ ನೀನು ನಮ್ಮ ಮನೆಗೆ ಬಂದ ಮೇಲೆ ಧರಿದ್ರ ಬಂದಿದೆ ನೀನು ಎಲ್ಲಾದರೂ ಹೋಗಿ ಸಾಯಿ ಎಂದು ಮನಸ್ಸಿಗೆ ನೋವುಂಟಾಗುವಂತೆ ಮಾನಸಿಕವಾಗಿ ಹಿಂಸೆಯನ್ನು ನೀಡಿದ್ದು, ಇದರಿಂದಾಗಿ ಸಾಕ್ಷಿ-1 ರವರು ಮನನೊಂದು ದಿನಾಂಕ:02.01.2022 ರಂದು ಮದ್ಯಾಹ್ನ 2.00 ಗಂಟೆ ಸಮಯದಲ್ಲಿ ತನ್ನ ಮನೆಯಲ್ಲಿದ್ದ ಕ್ರಿಮಿನಾಶಕ ಔಷಧಿಯನ್ನು ಕುಡಿದಿದ್ದರಿಂದ ಸಾಕ್ಷಿ-1 ರವರಿಗೆ ಸಾಮಾನ್ಯ ಸ್ವರೂಪದ ಗಾಯವುಂಟಾಗಿದ್ದು, ಆ ಮೂಲಕ ಭಾರತೀಯ ದಂಡ

ಸಂಹಿತೆ ಕಲಂ 323 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

(ಮೇಲ್ಕಂಡ ಆಪಾದನೆಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆಪಾದನೆಗಳಿಗೆ ಆರೋಪಿತರಾದ ನೀವುಗಳು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

**(ನಮ್ರತಾ ಎಸ್. ಹೊಸಮಠ)**

ದಿನಾಂಕ: **19.05.2025**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾ ಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

## ಸಿ.ಸಿ. ಸಂಖ್ಯೆಃ 2400/2022

ಫಿರ್ಯಾದಿದಾರರುಃ ಸರ್ಕಾರದ ಪರ
ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆ
ಹುಣಸೂರು, ಮೈಸೂರು ಜಿಲ್ಲೆ.

ವಿರುದ್ಧ,

ಆರೋಪಿ/ಗಳು : **ಎ 2. ಚಾಮಮ್ಮ**
ಕೋಂ ಲೇಟ್ ಚೌಡ ನಾಯಕ,

ಭಾರತೀಯ ದಂಡ ಸಂಹಿತೆ ಕಲಂ **240(2)** ರ ಅಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆಃ ನಿಮಗೆ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ**?**

ಉತ್ತರಃ

ಪ್ರಶ್ನೆಃ ತಪ್ಪೊಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ**?**

ಉತ್ತರಃ

ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿಯು ನೀಡಿದ ಉತ್ತರವನ್ನು ಹಾಗೆಯೇ ದಾಖಲಿಸಿಕೊಂಡಿದೆಯೆಂದು ಈ ಮೂಲಕ ದೃಢೀಕರಿಸುತ್ತೇನೆ.

**(ನಮ್ರತಾ ಎಸ್. ಹೊಸಮಠ)**
ದಿನಾಂಕಃ **19.05.2025** ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.